ಇರಲಿಲ್ಲ. ದೇಸಾಯಿಯವರಿಗೂ ಮನೆಯಲ್ಲಿ ಒಬ್ಬ ಕೆಲಸದವರು ಬೇಕಾಗಿತ್ತು; ಅವರ ಹೆಂಡತಿಯೊಂದಿಗೆ ಕೈಕೆಲಸ ಮಾಡುತ್ತ ಕಮಲಾಬಾಯಿಯ ದಿನ ಕಳೆಯುತ್ತಿದ್ದವು.

ಸುನಂದಾ ಸುಂದರವಾದ ಹುಡುಗಿ. ವಕೀಲರ ಮನೆಯಲ್ಲಿ ಉಳಿದು ಹೆಚ್ಚಾಗಿದ್ದ ತಂಗಳು–ತಡಿ ಉಂಡರೂ ಸೊಂಪಾಗಿ ಬೆಳೆದಳು. ಆದರೆ, ಕೇಶವ ಮಾತ್ರ ಯತಾರ್ಥ ಸ್ವಭಾವದ ಯೇಚುಪೇಚಿಲ್ಲದ, ಸರಿ ತಪ್ಪು ತಿಳಿಯದ, ಕೆಲಸದಲ್ಲಿ ಚುರುಕಿಲ್ಲದ ಹುಡುಗ.

ಹೊಳೆಯುವ ಪಿಟ್ಯಾದ ಹಿಟ್ಟಿನಂತಹ ಬಣ್ಣದ ಹುಡುಗಿ ಸುನಂದಾಳ ಮ್ಯಾಲೆ ಅನೇಕ ಹುಡುಗರ ಹದ್ದಿನ ಕಣ್ಣು. ಅಂತಹ ಖಿಡಿಮೂಗು ಇಲ್ಲದಿದ್ದರೂ ಹೊಳೆಯುವ ಕಣ್ಣು ಮತ್ತ ಬೆಳ್ಳಗಿನ ಬಣ್ಣ ಎಲ್ಲವನ್ನೂ ಮುಚ್ಚಿಕೊಂಡು ಹೋಗಿತ್ತು. ಹಾಗಂತ ಆಕೆಯನ್ನು ಮದುವೆಯಾಗಲು ಯಾವ ಹಣವಂತ ಮನೆತನದ ಹುಡುಗರು ಸಿದ್ಧರಿರಲಿಲ್ಲ. ಎಷ್ಟಾದ್ರೂ ಅಡುಗೆ ಮಾಡುವವರ ಮಗಳು ಎಂಬ ತಾತ್ಸಾರ ಇದ್ದೇ ಇತ್ತು. ಹಾಗಾಗಿ ಕಮಲಾಬಾಯಿ ಯೋಗ್ಯತೆಗೆ ತಕ್ಕ ವರಗಳೆ ಬರುತಿದ್ದವು. ಹಂಗಂತ ಕಮಲಾಬಾಯಿ ಮಗಳ ಮದುವಿಗೆ ಬಹಳ ಚಿಂತಿ ಮಾಡ್ತಿದ್ದಳು, ನಾಕಾರು ಕಡೆ ವರಗಳ ಬಗ್ಗೆ ಕೇಳ್ತಿದ್ದಳು ಅಂತಲ್ಲ. ಆಕೆಯ ಬಗ್ಗೆ ಪಾಪ! ಅನ್ನುವ ಭಾವನೆಯಿದ್ದ ಜನರೆ ಕೆಲವು ವರಗಳನ್ನು ಹೇಳುತಿದ್ದರು. ಕೊನೆಗೆ ಪಂಚಮುಖಿ ಆಂಜನೇಯ ದೇವಸ್ಥಾನದ ಪ್ರಾಣೇಶನ ಜೊತೆ ಮದುವೆ ನಿಶ್ಚಯವಾಗಿ ಮುಂದೆ ಕೆಲವು ತಿಂಗಳಲ್ಲಿ ಮದುವೆ ಕಾರ್ಯವು ಮುಗಿಯಿತು. ಅವರಿವರು ಕೈಲಾದಷ್ಟು ಸಹಾಯ ಮಾಡಿದರು. ಆದರೆ, ಉಳಿದ ಎಲ್ಲ ಜವಾಬ್ದಾರಿಯನ್ನು ದೇಸಾಯಿಯವರೇ ವಹಿಸಿಕೊಂಡು ಕಮಲಾಬಾಯಿಯ ಭಾರ ಇಳಿಸಿದೆವು ಎಂಬ ಭಾವದಲ್ಲಿ ನೆಮ್ಮದಿಯನ್ನು ಅನುಭವಿಸಿದರು.

ವೈದಿಕ ವೃತ್ತಿಯವರಿಗೆ ಇರಬೇಕಾದ ಶ್ರದ್ಧೆ ಪ್ರಾಣೇಶಗೆ ಇರಲಿಲ್ಲ... ಜವಾಬ್ದಾರಿ ಎಂಬುದು

